ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/37/2015-16. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ತಿಪ್ಪಮ್ಮ ಗಂಡ ಲೇಟ್ ವಡ್ರ ತಿಮ್ಮಯ್ಯ<br>2)ವೆಂಕಟಮ್ಮ ಗಂಡ ಲೇಟ್ ಹನುಮಂತಪ್ಪ<br>ಚಿಕ್ಕಜೋಗಿಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು | ವೀರಭದ್ರಪ್ಪ ತಂದೆ ಯಲ್ಲಪ್ಪ<br>ಚಿಕ್ಕಜೋಗಿಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 387ಬಿ/1. ವಿಸ್ತೀರ್ಣ 4-30. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 387ಬಿ/1. ವಿಸ್ತೀರ್ಣ 4-30. ಎಕ್ರೆ ಜಮೀನನ್ನು ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ತಿಪ್ಪಮ್ಮ ಗಂಡ ಲೇಟ್ ವಡ್ರ ತಿಮ್ಮಯ್ಯ. ವೆಂಕಟಮ್ಮ ಗಂಡ ಲೇಟ್ ಹನುಮಂತಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಮಾಕನಡುಕು ಇವರು ನಮೂನೆ-21 ನೋಟಿಸನ್ನು ದಿನಾಂಕ 15-04-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ವೀರಭದ್ರಪ್ಪ ತಂದೆ ಯಲ್ಲಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 67/2014-15. ದಿನಾಂಕ 16-05-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-12-2015. ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಮಾಕನಡುಕು ಗ್ರಾಮದ ಸನಂ 387ಬಿ/1. ವಿಸ್ತೀರ್ಣ 4-30. ಎಕ್ರೆ ಜಮೀನು ನನ್ನ ಗಂಡನಾದ ತಿಮ್ಮಯ್ಯ ತಂದೆ ಲೇಟ್ ಚಿನ್ನತಿಮ್ಮಯ್ಯ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 01-04-1985 ರಂದು ಹಾಗೂ ನಮ್ಮ ಅತ್ತೆಯವರಾದ ಪಾಲಮ್ಮ ಗಂಡ ಚಿನ್ನತಿಮ್ಮಯ್ಯ ಇವರು ದಿನಾಂಕ 10-05-1985 ರಂದು ಹಾಗೂ ನನ್ನ ಗಂಡನ ತಮ್ಮನಾದ ವಡ್ರ ಹನುಮಂತಪ್ಪ ತಂದೆ ಚಿನ್ನತಿಮ್ಮಯ್ಯ ಇವರು ದಿನಾಂಕ 04-04-1990 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿಗೆ ನಾನು ವಾರಸುದಾರನಾಗಿದ್ದು ಹಾಗೂ ನನಗೆ ಸಂಬಂದಿಸಿದ ಜಮೀನು ಆಗಿರುತ್ತದೆ. ನನಗೆ ತಿಳಿಸದೇ ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಸದರಿ ಹಕ್ಕು ಬದಲಾವಣೆಯನ್ನು ತಡೆಹಿಡಿಯಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ತಕರಾರು ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಲು ಅಸಮರ್ಥರಾಗಿರುವ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 387ಬಿ/1. ವಿಸ್ತೀರ್ಣ 4–30. ಎಕ್ರೆ ಜಮೀನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ತಿಪ್ಪಮ್ಮ ಗಂಡ ಲೇಟ್ ವಡ್ರ ತಿಮ್ಮಯ್ಯ ವೆಂಕಟಮ್ಮ ಗಂಡ ಲೇಟ್ ಹನುಮಂತಪ್ಪ. ಚಿಕ್ಕಜೋಗಿಹಳ್ಳಿ ತಾಂಡ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ತಿಪ್ಪಮ್ಮ ಗಂಡ ಲೇಟ್ ವಡ್ರ ತಿಮ್ಮಯ್ಯ. ವೆಂಕಟಮ್ಮ ಗಂಡ ಲೇಟ್ ಹನುಮಂತಪ್ಪ. ಚಿಕ್ಕಜೋಗಿಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ವೀರಭದ್ರಪ್ಪ ತಂದೆ ಯಲ್ಲಪ್ಪ ಚಿಕ್ಕಜೋಗಿಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.